**KANNADA CODE: 015**

**SUBJECT: KANNADA**

**CLASS -X**

**Model Question Paper**

**Key answers (ಉತ್ತರಗಳು)**

## Section – A

### ವಾಚನ ಮತ್ತು ಗ್ರಹಿಕಾ ಕೌಶಲ್ಯ - 4 ಅಂಕಗಳು

**I. ಈ ಕೆಳಗಿನ ಗದ್ಯಾಂಶವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

1. ಶಿವಪ್ಪನಾಯಕನು ಮೈಸೂರು ಸಂಸ್ಥಾನದ ಹಾಸನ ಮತ್ತು ಚಿಕ್ಕಮಗಳೂರಿನ ಪ್ರದೇಶ, ಕಾಸರಗೋಡು ಇತ್ಯಾದಿ ಪ್ರದೇಶಗಳನ್ನು ಗೆದ್ದು 'ಶಿಸ್ತು' ಎಂಬ ಹೆಸರಿನಲ್ಲಿ ಭೂಕಂದಾಯವನ್ನು ಜಾರಿಗೆ ತಂದನು. ಪೋರ್ಚುಗೀಸರ ಪ್ರಾಬಲ್ಯವನ್ನು ಮೊಟಕು ಮಾಡಿ, ಅರಬ್ಬೀ ಸಮುದ್ರದ ಒಂದು ದ್ವೀಪವನ್ನು ವಶಪಡಿಸಿಕೊಂಡು 'ಪಡುಗಡಲ ಒಡೆಯ' ಎಂಬ ಬಿರುದನ್ನೂ ಪಡೆದಿದ್ದನು ಇವೇ ಶಿವಪ್ಪನಾಯಕನ ಸಾಧನೆಗಳು. 2
2. ಚೆನ್ನಮ್ಮಾಜಿಯು ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿದಳು. ಏಕೆಂದರೆ ಔರಂಗಜೇಬನಿಗೆ ಹೆದರಿ ತನ್ನನ್ನು ರಕ್ಷಿಸಬೇಕೆಂದು ಕೇಳಿದ್ದರಿಂದ ಅವನಿಗೆ ಆಶ್ರಯ ನೀಡಿದಳು. 2

## Section – B

### ಅನ್ವಯಿಕ ವ್ಯಾಕರಣ - 4 ಅಂಕಗಳು

**II. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಬರೆಯಿರಿ.**

3. **ಗಾದೆಯ ಮಾತನ್ನು ವಿಸ್ತರಿಸಿ ಬರೆಯಿರಿ.** 2

"ಬೆಳೆಯುವ ಸಿರಿ ಮೊಳಕೆಯಲಿ"

ಮೊಳಕೆಯಲ್ಲಿ ಪೈರು ಬೆಳೆಯುವ ಬಗೆಯು ಗೊತ್ತಾಗುತ್ತದೆ. ಹಾಗೆಯೇ ಒಬ್ಬ ವ್ಯಕ್ತಿಯ ಗುಣಾವಗುಣಗಳನ್ನು ಆತನ ಬಾಲ್ಯದಲ್ಲಿಯೇ ತಿಳಿಯಬಹುದಾಗಿದೆ. ಮೂರುವರ್ಷದ ಬುದ್ಧಿ ನೂರು ವರ್ಷದವರೆಗೆ ಅಂದರೆ ಬಾಲ್ಯದಲ್ಲಿ ಉತ್ತಮನಡವಳಿಕೆ, ಗುಣಸ್ವಭಾವಗಳನ್ನು ಹೊಂದಿರುವವರು ಕೊನೆಯವರೆಗೂ ಅದೇ ಸ್ವಭಾವವನ್ನು ಹೊಂದಿರಲು ಸಾಧ್ಯ.

ಅಥವಾ

"ಮಾಡಿದುಣ್ಣೊ ಮಾರಾಯ".

ಮನುಷ್ಯ ತಾನು ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಲೇಬೇಕು.ತಾನು ಮಾಡಿದ ಕರ್ಮವನ್ನು ತಾನೇ ಅನುಭವಿಸಬೇಕು.

4. ಈ ಕೆಳಗಿನ ವಾಕ್ಯದಲ್ಲಿರುವ ಎರಡು ವಿಧ್ಯರ್ಥಕ ಮತ್ತು ಎರಡು ನಿಷೇಧಾರ್ಥಕ ಪದಗಳನ್ನು ಗುರುತಿಸಿ ಬರೆಯಿರಿ.

ನೀಡಲಿ, ಹರಡಲಿ - ವಿಧ್ಯರ್ಥಕ

ಹೋಗದು, ಬಿಡದ - ನಿಷೇಧಾರ್ಥಕ

**ಬರೆವಣಿಗೆ ಕೌಶಲ - 12 ಅಂಕಗಳು**

**III ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಬರೆಯಿರಿ.**

5. ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಪ್ರಬಂಧ ಬರೆಯಿರಿ. 4

- ಪೀಠಿಕೆ --½
- ವಿಷಯ ವಿವರಣೆ -2
- ಉಪಸಂಹಾರ/ಮುಕ್ತಾಯ --½
- ಭಾಷಾಶೈಲಿ - 1

6. ದೂರದೂರಿನಲ್ಲಿರುವ ನಿಮ್ಮ ತಂದೆಯವರಿಗೆ ನೀವು ಓದಿದ ಒಂದು ಉತ್ತಮ ಪುಸ್ತಕವನ್ನು ಕುರಿತು ಪತ್ರ ಬರೆಯಿರಿ. 4

- ಇಂದ ಮತ್ತು ಅವರಿಗೆ --- ½
- ದಿನಾಂಕ -- ½
- ಸಂಬೋಧನೆ --- ½
- ಪತ್ರದ ಒಡಲು -1½
- ಮುಕ್ತಾಯದ ಒಕ್ಕಣೆ -- ½
- ಭಾಷಾಶೈಲಿ --½

**ಅಥವಾ**

ದಿನಾಂಕ 19/09/2021 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ಉಡುಪಿಯ ವಿದ್ಯಾಪೀಠ ಶಾಲೆಯಲ್ಲಿ ಖಾಲಿಯಿರುವ ಕನ್ನಡ ಶಿಕ್ಷಕರ ಹುದ್ದೆಗೆ ಅಲ್ಲಿನ ಕಾರ್ಯದರ್ಶಿಗಳಿಗೆ ನಿಮ್ಮ ಸ್ವ-ವಿವರಗಳೊಂದಿಗೆ ಅರ್ಜಿಸಲ್ಲಿಸಿ.

- ಇಂದ ಮತ್ತು ಅವರಿಗೆ --- ½
- ದಿನಾಂಕ -- ½
- ವಿಷಯ ಮತ್ತು ಉಲ್ಲೇಖ --- ½
- ಸ್ವ-ವಿವರ --1½
- ಮುಕ್ತಾಯದ ಒಕ್ಕಣೆ -- ½
- ಭಾಷಾಶೈಲಿ --½

7. ದಿನ ಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ಅನುಭವಿಸುತ್ತಿರುವ ತೊಂದರೆಗಳನ್ನು ಕುರಿತು ಒಂದು ವರದಿ ಸಿದ್ಧಪಡಿಸಿ. 4

- ಶೀರ್ಷಿಕೆ — ½
- ಸ್ಥಳ ಮತ್ತು ದಿನಾಂಕ ---1
- ವರದಿಯ ಒಡಲು ---2
- ವರದಿಗಾರರ ರುಜು - -½

**Section – C**

**ಪಠ್ಯಗಳ ಅಧ್ಯಯನ - 20 ಅಂಕಗಳು**

IV. **ಈ ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2X3= 6**

8. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?

ಉತ್ತರ - 1900 ರಲ್ಲಿ ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಯಿತು. (½) ಇದು ಭಾರತ ಮಾತ್ರವಲ್ಲ, ಏಷ್ಯಾ ಖಂಡದಲ್ಲೇ ಮೊದಲ ಜಲವಿದ್ಯುತ್ ಯೋಜನೆ. (½) 1907 ರಲ್ಲಿ ವಾಣಿ ವಿಲಾಸ ಸಾಗರ(ಮಾರಿ ಕಣಿವೆ) ಕಟ್ಟಲ್ಪಟ್ಟಿತು. (½)1911 ರಲ್ಲಿ ಕೃಷ್ಣರಾಜ ಸಾಗರದ ಯೋಜನೆ. (½)

9. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?

ಉತ್ತರ - ಕವಿಯಾತ್ಮವು ಪ್ರಕೃತಿ ಹಸುರನ್ನು ಕಂಡು ಆ ಪ್ರಕೃತಿಯಲ್ಲಿಯೇ ವಿಲೀನವಾಗಿರುವಂತೆ ಭಾಸವಾಗುತ್ತದೆ. (½) ಆಶ್ವಯುಜ ಮಾಸದ ನವರಾತ್ರಿಯಲ್ಲಿ ವಿಶಾಲವಾದ ಕಡಲು,ಹಸುರಾಗಸ,ಹಸುರು ಮುಗಿಲು,ಹಸುರು ಗದ್ದೆಯ ಬಯಲು, ಹಸುರಿನ ಮಲೆ, ಹಸುರು ಕಣಿವೆ, ಸಂಜೆಯ ಬಿಸಿಲು, (½)ಆಶ್ವೀಜದ ಶಾಲಿವನದ ಗಿಳಿಯ ಹಸುರು ಬಣ್ಣದ ನೋಟ, ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ, ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಪಸರಿಸಿದಂತೆ ಭೂಮಿಯು ಹಸುರುಟ್ಟದ್ದು ಹೊಸ ಹೂವಿನ ಕಂಪು, (½)ತಂಗಾಳಿಯ ತಂಪು, ಹಕ್ಕಿಯ ಇಂಪಾದ ಗಾನ, ಎತ್ತೆತ್ತ ನೋಡಿದರೂ ಹಸುರು ಹೀಗೆ ಒಂದರಲ್ಲೊಂದು ಪರಸ್ಪರ ಐಕ್ಯವಾಗಿ ಒಂದೇ ಎಂಬ ಭಾವನೆ ಉಂಟಾಗಿ ಕವಿಯಾತ್ಮವು ಹಸುರುಗಟ್ಟಿದೆ. (½)

10. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

ಉತ್ತರ - ಯಾರನ್ನೇ ಆಗಲಿ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. (½) ಶತ್ರುವನ್ನಾದರೂ ಸರಿಯೆ, (½) ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೆ. (½) ಆದುದರಿಂದ ಹುಲಿಯು ಹಿಂದಿನಿಂದ ಹಾರಿ ಶಾನುಭೋಗರನ್ನು ಕೊಲ್ಲಲಿಲ್ಲ. (½)

**V. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **3X2 = 6**

11. ''ಈತನ ಮಾತು ಅಶ್ರುತಪೂರ್ವಮ್''(½)

ಉತ್ತರ - ಈ ಮಾತನ್ನು ದುರ್ಗಸಿಂಹ(½) ಕವಿ ಬರೆದಿರುವ 'ವೃಕ್ಷಸಾಕ್ಷಿ' ಎಂಬ ಪಾಠದಿಂದ ಆರಿಸಲಾಗಿದೆ. (½)

ಈ ಮಾತನ್ನು ಧರ್ಮಾಧಿಕರಣದವರು ಹೇಳಿಕೊಳ್ಳುವ ಮಾತಿದು. (½)

ತಾವಿಬ್ಬರೂ ಒಟ್ಟಿಗೆ ಸಂಪಾದಿಸಿದ ಹಣವನ್ನು ಇಬ್ಬರೂ ಕೂಡಿ ದೊಡ್ಡ ಮರದ ಹತ್ತಿರ ಹೂತಿಟ್ಟಿದ್ದೆವು. ಆ ಸಂಪತ್ತನ್ನೆಲ್ಲ ಧರ್ಮಬುದ್ಧಿಯೇ ತೆಗೆದುಕೊಂಡು ಹೋಗಿದ್ದಾನೆ, ಎಂದು ದುಷ್ಟಬುದ್ಧಿಯು ಧರ್ಮಾಧಿಕರಣದವರ ಬಳಿ ದೂರು ಕೊಡುತ್ತಾನೆ. (½) ಹಣವನ್ನಿರಿಸುವಾಗ ಧರ್ಮಬುದ್ಧಿ ಮತ್ತು ನಾನಲ್ಲದೆ ಅಲ್ಲಿ ಬೇರಾರೂ ಇರಲಿಲ್ಲ. ಅಲ್ಲಿದ್ದ ಮರವೇ ಅದಕ್ಕೆ ಸಾಕ್ಷಿ ಎನ್ನುತ್ತಾನೆ. (½)ಮರವು ಸಾಕ್ಷಿ ನುಡಿಯುವುದೆಂಬುದನ್ನು ಹಿಂದೆಂದೂ ಕೇಳಿಲ್ಲ. ಇದೊಂದು ಅಚ್ಚರಿಯ ಸಂಗತಿ. ಅದನ್ನು ನೋಡೋಣವೆಂದು ಧರ್ಮಾಧಿಕರಣದವರು ಅಭಿಪ್ರಾಯಪಡುತ್ತಾರೆ. (½)

ಅಥವಾ

''ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"

ಉತ್ತರ - ಈ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ (½) ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬಿ ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು'(½) ಎಂಬ ಪಾಠದಿಂದ ಆರಿಸಲಾಗಿದೆ.

ಲೇಖಕರು ಈ ಮಾತನ್ನು ಹೇಳಿದ್ದಾರೆ. (½)

ವಿಶ್ವೇಶ್ವರಯ್ಯನವರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ (½)ಸ್ವತಃ ತಾವೇ ಅನ್ವೇಷಣೆ ಮಾಡಿದ ಸ್ವಯಂಚಾಲಿತ ಬಾಗಿಲುಗಳನ್ನು(½) ಯಶಸ್ವಿಯಾಗಿ ಅಳವಡಿಸಿದರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ವಿಶ್ವೇಶ್ವರಯ್ಯ ಅವರಲ್ಲಿದ್ದ ಬುದ್ಧಿಶಕ್ತಿ ಹಾಗೂ ಅನ್ವೇಷಣಾ ಸಾಮರ್ಥ್ಯವನ್ನು (½)ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ತಿಳಿಸಿಕೊಡಲಾಗಿದೆ.

12. ''ಹಸುರಾದುದು ಕವಿಯಾತ್ಮಂ"

ಉತ್ತರ - ಈ ವಾಕ್ಯವನ್ನು ಕುವೆಂಪು (½)ಅವರು ಬರೆದಿರುವ ' ಪಕ್ಷಿಕಾಶಿ ' ಕವನ ಸಂಕಲನದಿಂದ ಆಯ್ದ 'ಹಸುರು'(½) ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. (½)

ನವರಾತ್ರಿಯು ನವಧಾತ್ರಿಯು ಈ ಶ್ಯಾಮಲ ವರ್ಣದ ಕಡಲಿನಲ್ಲೂ ಕವಿಯ ಆತ್ಮ ಹಸುರಾಯಿರು, ರಸಪಾನದಲ್ಲಿ ಮಿಂದಿತು ಎಂದು ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವರ್ಣಿಸುವ ಸಂದರ್ಭದಲ್ಲಿ ಹೇಳಿದ ಮಾತಿದು. (½)ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ, ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಅವಿನಾಭಾವ ಸಂಬಂಧವನ್ನು ತೋರಿಸುತ್ತದೆ. (½)

ನವರಾತ್ರಿಯ ಕಪ್ಪು ಕಡಲಿನಲ್ಲು ಹಸುರನ್ನು (½)ಕಾಣುವ ಕುವೆಂಪು ಅವರ ಕವಿಯಾತ್ಮದ ಪ್ರಕೃತಿಯ ರಸ ಸ್ವಾದನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

ಅಥವಾ

''ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

ಉತ್ತರ - ಈ ಮೇಲಿನ ಮಾತನ್ನು ಲಕ್ಷ್ಮೀಶ ಕವಿ ಬರೆದಿರುವ 'ವೀರಲವ' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ. (½)

ಈ ಮಾತನ್ನು ಲವನು ತನ್ನ ಮನಸ್ಸಿನಲ್ಲಿಯೇ ಹೇಳಿಕೊಳ್ಳುವನು. (½)

ರಾಮನ ಯಾಗದ ಕುದುರೆ ಹಸಿರು ಹುಲ್ಲನ್ನು ತಿನ್ನಲು ಉದ್ಯಾನಕ್ಕೆ ನುಗ್ಗಿದ್ದನ್ನು ಕಂಡ ಕೂಡಲೇ ತನ್ನ ಜವಾಬ್ದಾರಿಯನ್ನು ಅರಿತ ಲವನು ಸ್ವಲ್ಪವೂ ಅಂಜದೆ ಕುದುರೆಯನ್ನು ಹಿಡಿದು ಕಟ್ಟಲು ಮುಂದಾಗುತ್ತಾನೆ. ಹತ್ತಿರ ಹೋಗಿ ಕುದುರೆ ಹಣೆ ಫಲಕದ ಮೇಲೆ ಬರೆದಿದ್ದ 'ಕೌಸಲ್ಯೆಯು ಹೆತ್ತ ಮಗನಾದ ರಾಮನೊಬ್ಬನೇ ಭೂಮಿಯಲ್ಲಿ ಶೂರನಾಗಿದ್ದಾನೆ. (½)ಇದು ಆತನ ಯಾಗದ ಕುದುರೆ ಸಮರ್ಥರಾದವರು ಯಾರಾದರೂ ಅದನ್ನು ತಡೆಯಲಿ' ಎಂಬ ಬರಹವನ್ನು ಕಂಡು ಕೆಂಡಮಂಡಲಗೊಳ್ಳುವನು. ರಾಮನೊಬ್ಬನೇ ಶೂರನೇ? ಸೀತೆಯ ಮಗನಾದ ನಾನು ಶೂರನಲ್ಲವೇ? ನನ್ನ ಶೌರ್ಯ, ಪರಾಕ್ರಮವೇನೆಂಬುದನ್ನು ನಾನು ತೋರಿಸುತ್ತೇನೆ, (½)ಕೌಸಲ್ಯೆಯ ಮಗನ ಸೊಕ್ಕನ್ನು ಮುರಿಯುತ್ತೇನೆ, ನಾನು ನನ್ನ ಶೌರ್ಯವನ್ನು ತೋರದಿದ್ದರೆ ತಾಯಿಗೆ ತಕ್ಕ ಮಗನಾಗುವುದಿಲ್ಲ. ನಾನು ರಾಮನ ಹಮ್ಮನ್ನು ಇಳಿಸುವ ಪ್ರಯತ್ನ ಮಾಡದಿದ್ದರೆ, ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯದೆ ಇರುತ್ತಾರೆಯೇ? ಎಂದು ಯೋಚಿಸುತ್ತಾನೆ. (½)

ಮಕ್ಕಳಿಲ್ಲದ ಸ್ತ್ರೀಯನ್ನು ಬಂಜೆ ಎನ್ನುತ್ತಾರೆ. ತಾನು ತನ್ನ ಶೌರ್ಯವನ್ನು ತೋರದಿದ್ದರೆ ನನ್ನ ತಾಯಿಗೆ ತಕ್ಕ ಮಗನಾಗುವುದಿಲ್ಲ. ಆಕೆ ವೀರಮಾತೆಯೆನಿಸುವುದಿಲ್ಲ ಎಂಬುದು ಲವನ ಭಾವನೆಯಾಗಿದೆ. (½)

**VI. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ.** **2X 2=4**

13. ಭಗತ್ ಸಿಂಗ್‌ನ ಸಹಚರರು ಯಾರು?

ಉತ್ತರ - ಭಗತ್ ಸಿಂಗ್ ನ ಸಹಚರರು(½) ಸುಖದೇವ್. (½)ರಾಜ್ಗುರು, (½)ಭಟುಕೇಶ್ವರ ದತ್ತ. (½)

14. ಮೃಗದ ಬಾಹ್ಯ ಆಕಾರ ಹೇಗಿತ್ತು?

ಉತ್ತರ - ಮೃಗದ ಬಾಹ್ಯ ಆಕಾರ ಕೋರೆ ಹಲ್ಲು, (½) ಹಂದಿಯ ದೇಹ, (½)ತೋಳದ ಚಲನೆ, ಕರ್ಕಶ ಸದ್ದು, (½) ಗೊಗ್ಗರು ಧ್ವನಿಯನ್ನು ಹೊಂದಿತ್ತು. (½)

**VII. ಈ ಕೆಳಗಿನ ಪ್ರಶ್ನೆಗೆ ಸುಮಾರು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4X1 =4**

15. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

ಉತ್ತರ - ಭೂಮಂಡಲದ ಪರಾಕ್ರಮಿ ರಾಜರುಗಳೆಲ್ಲಾ ಶ್ರೀರಾಮನ ಹೆಸರನ್ನು ಕೇಳಿ ಯಾಗದ ಕುದುರೆಯನ್ನು ತಡೆಯದೆ ಸೂಕ್ತ ಕಪ್ಪಕಾಣಿಕೆಯನ್ನಿತ್ತು ಕುದುರೆ ಮುಂದೆ ಹೋಗುವಂತೆ ನಮಸ್ಕರಿಸಿದರು. (½)ಹೀಗೆ ಭೂಮಂಡಲದಲ್ಲಿ ಮುಂದುಮುಂದಕ್ಕೆ ಸಂಚರಿಸುತ್ತಾ ಶ್ರೀರಾಮನ ಯಾಗದ ಕುದುರೆ ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ಬಂದಿತು. ಆಶ್ರಮದವರ ಬಳಕೆಯ ಉದ್ಯಾನದ ಒಳಗೆ ಇದ್ದ ಹಸಿರು ಹುಲ್ಲನ್ನು ತಿನ್ನಲು ಬಯಸಿ ಒಳಕ್ಕೆ ನುಗ್ಗಿ ಬಾಳೆ ತೋಟವನ್ನು ತುಳಿದು ಹಾಳು ಮಾಡುತ್ತಿತ್ತು. (½) ವಾಲ್ಮೀಕಿ ಮುನಿಗಳು ವರುಣ ಲೋಕಕ್ಕೆ ಹೋಗುವ ಮೊದಲು ಲವನನ್ನು ಕರೆದು ಈ ತೋಟವನ್ನು ಹಾಳಾಗದಂತೆ ಚೆನ್ನಾಗಿ ನೋಡಿಕೊಳ್ಳಬೇಕೆಂದು ಹೇಳಿ ಹೋಗಿದ್ದರು. (½) ತನ್ನ ಗೆಳೆಯರೊಡನೆ ಅಲ್ಲಿಗೆ ಬಂದ ಲವನು ತನ್ನ ಉದ್ಯಾನವನ್ನು ಹಾಳು ಮಾಡುತ್ತಿದ್ದ ಕುದುರೆಯನ್ನು ಕಂಡನು. (½)ವರುಣಲೋಕದಿಂದ ಹಿಂದಿರುಗಿ ಬರುವ ವಾಲ್ಮೀಕಿ ಮುನಿಗಳು ಹಾಳಾದ ತೋಟ ನೋಡಿ ನನ್ನನ್ನು ಬೈಯುವರೆಂದು ತಕ್ಷಣವೆ ಅದನ್ನು ಕಟ್ಟಲು ಕುದುರೆಯ ಬಳಿ ಬಂದಾಗ ಲವನಿಗೆ ಕುದುರೆಯ ಹಣೆಯ ಮೇಲೆ ಕಟ್ಟಿದ್ದ ಪಟ್ಟಿಕೆಯಲ್ಲಿದ್ದ ಬರಹ ಕಾಣಿಸಿತು. (½)ಅದರಲ್ಲಿ 'ಕೌಸಲ್ಯೆಯು ಹೆತ್ತ ಮಗನಾದ ರಾಮನೊಬ್ಬನೇ ಭೂಮಿಯಲ್ಲಿ ಶೂರನಾಗಿದ್ದಾನೆ. (½)ಇದು ಆತನ ಯಾಗದ ಕುದುರೆ ಸಮರ್ಥರಾದವರು ಯಾರಾದರೂ ಅದನ್ನು ತಡೆಯಲಿ' ಎಂಬ ಬರಹವನ್ನು ಕಂಡು ಕೆಂಡಮಂಡಲಗೊಳ್ಳುವನು. ರಾಮನೊಬ್ಬನೇ ಶೂರನೇ? ಸೀತೆಯ ಮಗನಾದ ನಾನು ಶೂರನಲ್ಲವೇ? (½)ನನ್ನ ಶೌರ್ಯ, ಪರಾಕ್ರಮವೇನೆಂಬುದನ್ನು ನಾನು ತೋರಿಸುತ್ತೇನೆ, ಕೌಸಲ್ಯೆಯ ಮಗನ ಸೊಕ್ಕನ್ನು ಮುರಿಯುತ್ತೇನೆ, (½) ರಾಮನಿಗೆ ತನ್ನ ಪರಾಕ್ರಮವನ್ನು ತೋರಿಸಬೇಕೆಂದು ಆಶ್ರಮದೊಳಗೆ ಬಂದ ಯಜ್ಞಾಶ್ವವನ್ನು ಲವನು ಕಟ್ಟಿ ಹಾಕಿದನು.

**ಅಥವಾ**

''ಸತ್ಯಕ್ಕೆ ಸಾವಿಲ್ಲ ಎಂಬ ಮಾತು 'ವೃಕ್ಷಸಾಕ್ಷಿ' ಪಾಠದಲ್ಲಿ ಯಾರ ಪಾತ್ರದ ಮೂಲಕ ಹೇಗೆ ವಿವರಿಸಲಾಗಿದೆ.

ಉತ್ತರ - ಸತ್ಯಕ್ಕೆ ಸಾವಿಲ್ಲ ಎಂಬ ಮಾತು ವೃಕ್ಷಸಾಕ್ಷಿ ಪಾಠದಲ್ಲಿ ಧರ್ಮಬುದ್ಧಿಯ (½)ಪಾತ್ರದ ಮೂಲಕ ವಿವರಿಸಲಾಗಿದೆ. ಧರ್ಮಬುದ್ಧಿಯು ಹೆಸರಿಗೆ ತಕ್ಕ ನಡೆ-ನುಡಿಯುಳ್ಳವನಾಗಿದ್ದಾನೆ. (½)ಅನ್ಯರ ಮಾತನ್ನು ತಿರಸ್ಕರಿಸದೆ ಸಮ್ಮತಿಸುವ ಸ್ವಭಾವ ಅವನದು. ಧರ್ಮಬುದ್ಧಿಯು ದುಷ್ಟಬುದ್ಧಿಯೊಡನೆ ವ್ಯಾಪಾರಕ್ಕೆಂದು ಹೋಗಿ ಸಂಪತ್ತನ್ನು ಸಂಪಾದಿಸಿಕೊಂಡು ಬರುತ್ತಾನೆ. (½)ಅದನ್ನು ಹಂಚಿಕೊಳ್ಳಲು ಬಯಸಿದಾಗ ದುಷ್ಟಬುದ್ಧಿಯ ಸಲಹೆಯನ್ನು ಮರುಮಾತಿಲ್ಲದೆ ಒಪ್ಪಿಕೊಳ್ಳುತ್ತಾನೆ. ದುಷ್ಟಬುದ್ಧಿ ಸಂಪತ್ತನ್ನು ಅಪಹರಿಸಿ, ಧರ್ಮಬುದ್ಧಿಯ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿ ಬೊಬ್ಬೆ ಹಾಕಿದರೂ ಅವನು ಜಗಳವಾಡುವುದಿಲ್ಲ. ನ್ಯಾಯತೀರ್ಮಾನಕ್ಕೆ

ಕರೆದಾಗಲೂ ಒಪ್ಪಿ ಹೋಗುತ್ತಾನೆ ಏಕೆಂದರೆ ಸತ್ಯವೇನೆಂಬುದು ಅವನಿಗೆ ತಿಳಿದಿತ್ತು. (½) ಮನುಷ್ಯನ ಪಾಪ-ಪುಣ್ಯ ಕೃತ್ಯಗಳನ್ನು ದೇವರು ಗಮನಿಸುತ್ತಾನೆ ಎಂದು ಅವನು ನಂಬಿದ್ದನು. (½)ನ್ಯಾಯತೀರ್ಮಾನವಾಗುವ ದಿನವೂ ಅವನಲ್ಲಿ ಅಶಾಂತಿ, ಗಡಿಬಿಡಿ, ಗೊಂದಲ ಕಾಣಿಸುವುದಿಲ್ಲ. ಅಂದೂ ಅವನು ಎಂದಿನಂತೆ ದೇವ,ಗುರು,ದ್ವಿಜ ಪೂಜೆಯನ್ನು ನೆರವೇರಿಸುತ್ತಾನೆ. ತಾನು ತಪ್ಪು ಮಾಡಿಲ್ಲ, (½)ಅಪರಾಧಿ ನಾನಲ್ಲ ಎನ್ನುವ ದೃಢವಾದ ಮನಸ್ಸು ಅವನದ್ದಾಗಿತ್ತು. ಸತ್ಯವು ಎಂದೂ ಸೋಲುವುದಿಲ್ಲ ಎಂಬ ವಿಶ್ವಾಸವನ್ನು ಹೊಂದಿದ್ದನು.

ಮರದಿಂದ ಹೊರಬಂದ ನುಡಿಯನ್ನು ಕೇಳಿದಾಗ ಅವನಿಗೆ ಇದು ದೇವರ ಮಾತಲ್ಲ. (½)ಏಕೆಂದರೆ ದೈವವು ಸುಳ್ಳನ್ನು ಹೇಳುವುದಿಲ್ಲ ಎಂದೆನಿಸಿ, ಇದರಲ್ಲಿ ಏನೋ ಮೋಸವಿದೆ ಎಂದು ವಂಚನೆಯ ರಹಸ್ಯವನ್ನು ಹೊರಹಾಕುತ್ತಾನೆ. (½)ಅವನು ನಂಬಿದ್ದ ಸತ್ಯ, ದೇವರು ಅವನನ್ನು ಕೈಬಿಡಲಿಲ್ಲ. ಸತ್ಯಕ್ಕೆ ಎಂದೂ ಸಾವಿಲ್ಲ ಎಂಬ ಮಾತು ಸತ್ಯದಷ್ಟೇ ಸುಂದರವಾಗಿತ್ತು.

*******************************************************************************************